# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1376 (1598) |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ<br>(ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19/12/2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025-26 ಮುಂಗಾರು ಹಂಗಾಮಿನಲ್ಲಿ ರಾಜ್ಯಾದ್ಯಂತ ಮೆಕ್ಕೆಜೋಳ ಬೆಳೆದಿರುವ ಒಟ್ಟು ಪ್ರದೇಶ ಹಾಗೂ ನಿರೀಕ್ಷಿತ ಉತ್ಪಾದನೆ ಎಷ್ಟು; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು); | 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮೆಕ್ಕೆಜೋಳ ಬೆಳೆಯನ್ನು ರಾಜ್ಯದಲ್ಲಿ ಒಟ್ಟು 17.94 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ ಹಾಗೂ ಮೆಕ್ಕೆಜೋಳ ಬೆಳೆಯ ಉತ್ಪಾದನೆ ಗುರಿ ಒಟ್ಟು 54.74 ಲಕ್ಷ ಟನ್‌ಗಳಷ್ಟು ನಿರೀಕ್ಷಿಸಲಾಗಿದೆ.<br>2025-26ನೇ ಸಾಲಿನ ಮುಂಗಾರು ಹಂಗಾಮಿನ ಜಿಲ್ಲಾವಾರು ಮೆಕ್ಕೆಜೋಳ ಬೆಳೆಯ ವಿಸ್ತೀರ್ಣ ಹಾಗೂ ನಿರೀಕ್ಷಿತ ಉತ್ಪಾದನೆಯ ಗುರಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ರಾಜ್ಯದ ಎಲ್ಲಾ ಮಾರುಕಟ್ಟೆಗಳಲ್ಲಿ ಮೆಕ್ಕೆಜೋಳಕ್ಕೆ ಕೇವಲ ರೂ.1,800-2,100ಗಳ ದರದಲ್ಲಿ ಲಭಿಸುತ್ತಿದ್ದು, ಇದು ಕೇಂದ್ರ ಸರ್ಕಾರದ ರೂ.2,400 ಕನಿಷ್ಠ ಬೆಂಬಲ ಬೆಲೆಗೆ ಕಡಿಮೆಯಾಗಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರಗಳನ್ನು ನೀಡುವುದು) | ಬಂದಿದೆ.<br>ಸರ್ಕಾರವು ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡಲು, ದಿನಾಂಕ: 21.11.2025 ಮತ್ತು ದಿನಾಂಕ: 01.12.2025 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ತೀರ್ಮಾನದಂತೆ, ಡಿಸ್ಟಲರಿಸ್‌ಗಳಿಂದ, ಪಶು ಮತ್ತು ಕುಕ್ಕುಟ ಆಹಾರ ಉತ್ಪಾದಕ ಅಸೋಸಿಯೇಷನ್‌ರವರಿಂದ 5 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಾಲ್‌ಗೆ ರೂ.2,400/- ರಂತೆ ಹಾಗೂ ಸಾಗಾಣಿಕೆ ಮತ್ತು ಪ್ರಾಸಂಗಿಕ ವೆಚ್ಚವನ್ನು ಸರ್ಕಾರದಿಂದ ಭರಿಸಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ವತಿಯಿಂದ ಖರೀದಿಸಲು ಮತ್ತು 2025-26ನೇ ಸಾಲಿನಲ್ಲಿ ಕರ್ನಾಟಕ ಹಾಲು ಮಹಾಮಂಡಳಿಗೆ ಅಗತ್ಯವಿರುವ 1.0 ಲಕ್ಷ ಮೆ.ಟನ್ ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಾಲ್‌ಗೆ ರೂ.2,400/- ರಂತೆ ರೈತರಿಂದ ನೇರವಾಗಿ ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ (KSCMF) ಮೂಲಕ ಖರೀದಿ ಪ್ರಾರಂಭಿಸಲು ಕ್ರಮವಹಿಸುವಂತೆ, ಅಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ. |

| | | |
|---|---|---|
| ಇ) | ರಾಜ್ಯದ ರೈತರಿಗೆ ನಷ್ಟವಾಗದಂತೆ ಕಡ್ಡಾಯವಾಗಿ ಕೇಂದ್ರ ನಿಗದಿಪಡಿಸಿರುವ ರೂ.2,400 ಕನಿಷ್ಠ ಬೆಂಬಲ ಬೆಲೆಗೆ ಮೆಕ್ಕೆಜೋಳ ಖರೀದಿ ತಕ್ಷಣ ಪ್ರಾರಂಭಿಸಲು ಸರ್ಕಾರ ಏಕೆ ವಿಳಂಬ ಮಾಡುತ್ತಿದೆ; (ವಿವರಗಳನ್ನು ನೀಡುವುದು) | ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳದ ಪ್ರತಿ ಕ್ವಿಂಟಾಲ್‌ಗೆ ರೂ. 2,400/- ಘೋಷಿಸಿರುತ್ತದೆ. ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಿದ್ದಲ್ಲಿ ರಾಜ್ಯದ ಪಡಿತರ ವಿತರಣೆಗಾಗಿ ಬಳಸಲು ಮಾತ್ರ ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಆದರೆ, ರಾಜ್ಯದಲ್ಲಿ ಮೆಕ್ಕೆಜೋಳವನ್ನು ಆಹಾರ ಪದ್ಧತಿಯಲ್ಲಿ ಬಳಸದೇ ಇರುವುದರಿಂದ, ಇದು ಸಾಧ್ಯವಾಗದ ಕಾರಣ ಸನ್ಮಾನ್ಯ ಮುಖ್ಯಮಂತ್ರಿಯವರು ರಾಜ್ಯದ ರೈತರ ಹಿತದೃಷ್ಟಿಯಿಂದ ಎಥೆನಾಲ್ ಉತ್ಪಾದಿಸುವ ಡಿಸ್ಟಿಲರಿಗಳು, ಕುಕ್ಕುಟ ಹಾಗೂ ಪಶು ಉತ್ಪಾದನಾ ಘಟಕಗಳ ಮುಖ್ಯಸ್ಥರು ಮತ್ತು ಕೆ.ಎಂ.ಎಫ್. ಸಂಸ್ಥೆಯವರೊಂದಿಗೆ ಸಮಾಲೋಚಿಸಿ ಮೆಕ್ಕೆಜೋಳವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ. 2,400/- ರಂತೆ ಖರೀದಿಸುವಂತೆ ಮನವೊಲಿಸಿ, ಖರೀದಿ ಪ್ರಕ್ರಿಯೆಯನ್ನು ದಿನಾಂಕ:01.12.2025 ರಿಂದ ಪ್ರಾರಂಭಿಸಲಾಗಿದೆ ಹಾಗೂ ಇದಕ್ಕೆ ತಗಲುವ ಸಾಗಾಣಿಕೆ ಮತ್ತು ಪ್ರಾಸಂಗಿಕ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಿ, ಮೆಕ್ಕೆಜೋಳವನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಸಂಸ್ಥೆಯ ಮೂಲಕ ಖರೀದಿಸಿ, ಸದರಿ ಸಂಸ್ಥೆಗಳ ಗೋದಾಮುಗಳಿಗೆ ಪೂರೈಸಲು ಕ್ರಮಕೈಗೊಳ್ಳಲಾಗಿದ್ದು, ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>FRUITS ತಂತ್ರಾಂಶದಲ್ಲಿ ಲಭ್ಯವಾಗುವ ಜಮೀನಿನ ವಿಸ್ತೀರ್ಣಕ್ಕೆ ಪ್ರತಿ ಎಕರೆಗೆ 12 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಟ 50 ಕ್ವಿಂಟಾಲ್‌ಗೆ ಹೆಚ್ಚಿಸಿ, ದಿನಾಂಕ: 07.12.2025 ರಂದು ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ.<br><br>ಅದರನ್ವಯ, ದಿನಾಂಕ: 16.12.2025 ರ ಅಂತ್ಯಕ್ಕೆ KSCMF ರವರಿಂದ ಎಥೆನಾಲ್ ಉತ್ಪಾದನಾ ಘಟಕಗಳಿಗೆ, ಕುಕ್ಕುಟ ಆಹಾರ ಉತ್ಪಾದನಾ ಘಟಕಗಳಿಗೆ ಹಾಗೂ ಕರ್ನಾಟಕ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಮೆಕ್ಕೆಜೋಳ ಪೂರೈಕೆಗಾಗಿ ಬೇಡಿಕೆ, ರೈತರ ನೋಂದಣಿ, ಖರೀದಿ ಪ್ರಮಾಣ ಮತ್ತು ಇತರೆ ಮಾಹಿತಿಗಳ ವಿವರ ಈ ಕೆಳಗಿನಂತಿವೆ.<br><br>• ಡಿಸ್ಟಿಲ್ಲರಿಗಳಿಂದ 15,747 ಮೆ. ಟನ್ ಮೆಕ್ಕೆಜೋಳ ಖರೀದಿಗೆ ಬೇಡಿಕೆ ಬಂದಿದ್ದು, 19 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. 4,780 ರೈತರು ನೋಂದಣಿ ಮಾಡಿಕೊಂಡಿರುತ್ತಾರೆ. 674.60 ಮೆ. |

| | | |
|---|---|---|
| | | ಟನ್ ಮೆಕ್ಕೆಜೋಳವನ್ನು 224 ರೈತರಿಂದ ಖರೀದಿಸಲಾಗಿದೆ.<br>• ಕರ್ನಾಟಕ ಹಾಲು ಒಕ್ಕೂಟ ಮಂಡಳಿ (KMF) ಇವರಿಂದ 50,000 ಮೆ. ಟನ್ ಮೆಕ್ಕೆಜೋಳ ಖರೀದಿಗೆ ಬೇಡಿಕೆ ಬಂದಿದ್ದು, 123 ಖರೀದಿ ಕೇಂದ್ರ ತೆರೆಯಲಾಗಿದ್ದು, 24,076 ರೈತರು ನೋಂದಣಿ ಮಾಡಿಕೊಂಡಿರುತ್ತಾರೆ. 5,117.36 ಮೆ. ಟನ್ ಮೆಕ್ಕೆಜೋಳವನ್ನು 2,792 ರೈತರಿಂದ ಖರೀದಿಲಾಗಿದೆ.<br>• ಪಶು ಮತ್ತು ಕುಕ್ಕುಟ ಆಹಾರ ಉತ್ಪಾದಕರ ಅಸೋಸಿಯೇಷನ್ ರವರಿಂದ 11,480 ಮೆ. ಟನ್ ಮೆಕ್ಕೆಜೋಳ ಖರೀದಿಗೆ ಬೇಡಿಕೆ ಬಂದಿದ್ದು, 19 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. 2,000 ರೈತರು ನೋಂದಣಿ ಮಾಡಿಕೊಂಡಿರುತ್ತಾರೆ. ಒಬ್ಬ (01) ರೈತರಿಂದ 48.00 ಕ್ವಿಂಟಾಲ್ (4.80 ಮೆ. ಟನ್) ಮೆಕ್ಕೆಜೋಳವನ್ನು ಖರೀದಿಸಲಾಗಿದೆ |
| ಈ) | ಮುಂದಿನ ದಿನಗಳಲ್ಲಿ ಆವಕ ಪ್ರಮಾಣ ಹೆಚ್ಚಳದಿಂದ ಬೆಲೆ ಇನ್ನಷ್ಟು ಕುಸಿಯುವ ಭೀತಿಗೆ ವಿರುದ್ಧವಾಗಿ ರಾಜ್ಯಾದ್ಯಂತ ಮೆಕ್ಕೆಜೋಳದ ಬೆಲೆ ಸ್ಥಿರೀಕರಣಕ್ಕಾಗಿ ಸರ್ಕಾರ ಯಾವ ತುರ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿದೆ; (ವಿವರಗಳನ್ನು ನೀಡುವುದು) | ಸರ್ಕಾರವು ರೈತರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಮೇಲ್ಕಂಡಂತೆ ಹಲವು ಕ್ರಮಗಳನ್ನು ಈಗಾಗಲೇ ಜರುಗಿಸಿದೆ. ಮಾರುಕಟ್ಟೆಯಲ್ಲಿ ಮೆಕ್ಕೆಜೋಳ ಉತ್ಪನ್ನಕ್ಕೆ ಇರುವ ಬೇಡಿಕೆ ಮತ್ತು ಧಾರಣೆ ಪರಿಸ್ಥಿತಿ ಅವಲೋಕಿಸುತ್ತಿದ್ದು, ರೈತರಿಗೆ ಹೆಚ್ಚಿನ ನೆರವು ನೀಡುವ ಸಂಬಂಧ ಕ್ರಮಗಳ ಬಗ್ಗೆ ಸರ್ಕಾರವು ಪರಿಶೀಲಿಸಲಾಗುತ್ತಿದೆ. |
| ಉ) | ರಾಜ್ಯ ಮಟ್ಟದಲ್ಲಿ ರೈತರಿಗೆ ತ್ವರಿತ ಪರಿಹಾರ ಒದಗಿಸಲು ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಸರ್ಕಾರ ಯಾವ ತೀರ್ಮಾನ ಕೈಗೊಂಡಿದೆ ಹಾಗೂ ಖರೀದಿ ಕಾರ್ಯ ಯಾವ ದಿನಾಂಕದಿಂದ ಪ್ರಾರಂಭವಾಗಲಿದೆ? (ಮಾಹಿತಿಯನ್ನು ಒದಗಿಸುವುದು) | ಉತ್ತರವನ್ನು (ಇ) ನಲ್ಲಿ ಒದಗಿಸಿರುವಂತೆ, |

ಸಂಖ್ಯೆ: AGRI/378/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು